ಓ.ಎಸ್.ನಂಃ 262/2017

ಡಿಡಬ್ಲ್ಯೂ-2

<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.10.2023 ರಂದು ಪ್ರಮಾಣೀಕರಿಸಲಾಯಿತು.</u>

**<u>ಪಾಟೀ ಸವಾಲು: ಶ್ರೀ ಇ.ಎಂ.ಕೆ ವಕೀಲರಿಂದಃ</u>**

ಚಿಕ್ಕಮಾದಪ್ಪ ಮತ್ತು ದೊಡ್ಡಮಾದಪ್ಪ ನಮ್ಮ ಸಂಬಂಧಿಕರಲ್ಲ. ಚಿಕ್ಕಮಾದಪ್ಪ ಮತ್ತು ದೊಡ್ಡಮಾದಪ್ಪರವರ ಮನೆ ಹತ್ತಿರ ನಮ್ಮ ಮನೆ ಇರುವುದಿಲ್ಲ. ನಾನು ಊರಿನ ಮುಖಂಡನಲ್ಲ. ವಾದಿ ಮತ್ತು ಪ್ರತಿವಾದಿ ವಿಭಾಗವಾದಾಗ ನಾನು ಹಾಜರಿರಲಿಲ್ಲ. ವಾದಿ ಮತ್ತು ಪ್ರತಿವಾದಿ ನಡುವೆ ಲಿಖಿತವಾಗಿ ವಿಭಾಗವಾಗಿಲ್ಲ. ದಾವ ಷೆಡ್ಯೂಲ್ ಆಸ್ತಿಯಲ್ಲಿ ವಿಭಾಗದಲ್ಲಿ ದೊಡ್ಡಮಾದಪ್ಪ ರವರಿಗೆ ಕೊಟ್ಟಿರುತ್ತಾರೆ. ದಾವ ಷೆಡ್ಯೂಲ್ ಆಸ್ತಿಯ ಹಾಜುಬಾಜು ನನ್ನ ಆಸ್ತಿ ಇರುವುದಿಲ್ಲ. ದಾವ ಷೆಡ್ಯೂಲ್ ಆಸ್ತಿಯಲ್ಲಿ ದೊಡ್ಡಮಾದಪ್ಪ ಮತ್ತು ಅವರ ಮಗ ವ್ಯವಸಾಯ ಮಾಡುತ್ತಿದ್ದಾರೆ. ಮರಣ ಶಾಸನ ಬರೆದಾಗ ನಾನು ಹಾಜರಿದ್ದೆ. ನನ್ನನ್ನು ನಾಗಮ್ಮರವರು ಕರೆದುಕೊಂಡು ಹೋಗಿದ್ದರು. ನಾನು ಪತ್ರಕ್ಕೆ ಸಹಿ ಹಾಕಿರುತ್ತೇನೆ. ವಾದಿ ಮತ್ತು ಪ್ರತಿವಾದಿ ನನ್ನ ಜೊತೆ ಅನ್ಯೂನ್ಯವಾಗಿದ್ದಾರೆ. ವಿಲ್ ಮಾಡುವಾಗ ನಾಗಮ್ಮರವರು ನಮ್ಮ ಮನೆಗೆ ಬಂದು ಗುಂಡ್ಲುಪೇಟೆಗೆ ಕರೆದುಕೊಂಡು ಬಂದಿರುತ್ತಾರೆ. ಗುಂಡ್ಲುಪೇಟೆಗೆ ಬಂದ ನಂತರ ವಿಲ್ ಮಾಡುವ ವಿಚಾರ ತಿಳಿಸಿರುತ್ತಾರೆ. ನಾಗಮ್ಮರವರು ದೊಡ್ಡಮಾದಪ್ಪ ರವರ ಜೊತೆ ವಾಸವಾಗಿದ್ದರು. ವಿಲ್ ಮಾಡುವಾಗ ನಾಗಮ್ಮರವರಿಗೆ ತುಂಬಾ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 75 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. ವಿಲ್ ಮಾಡಲು ಖರ್ಚು ವೆಚ್ಚವನ್ನು ನಾಗಮ್ಮರವರೇ ಬರಿಸಿರುತ್ತಾರೆ. ವಿಲ್ ವಿಚಾರವನ್ನು ನಾನು ವಾದಿ ಮತ್ತು ಪ್ರತಿವಾದಿಗೆ ತಿಳಿಸಿರುವುದಿಲ್ಲ, ಕಾರಣ ನಾಗಮ್ಮರವರು ಗುಂಡ್ಲುಪೇಟೆಗೆ ಬಂದ ನಂತರ ವಿಚಾರ ತಿಳಿಸಿರುತ್ತಾರೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ವಿಲ್ ನಲ್ಲಿರುವ ವಿಚಾರವನ್ನು ಓದಿ ತಿಳಿದುಕೊಂಡ ನಂತರ ನನ್ನ ಸಹಿ ಮಾಡಿರುತ್ತೇನೆ. ವಾದಿ ಮತ್ತು ನನಗೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ವಾದಿಯು ಮಹದೇವಪ್ಪರವರ ಆಸ್ತಿಯನ್ನು ಗುತ್ತಿಗೆಗೆ ಪಡೆದುಕೊಂಡಿದ್ದರು ಎಂದರೆ ಸರಿ. ಆ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನ ವಿಚಾರವಾಗಿ ನನಗೂ ವಾದಿಗೂ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ.

ನಾನು ಗಲಾಟೆ ಮಾಡಿದ್ದರಿಂದ ವಾದಿಯು ಮಹದೇವಪ್ಪರವರ ಆಸ್ತಿಯನ್ನು ಗುತ್ತಿಗೆಯಿಂದ ಬಿಟ್ಟುಬಿಟ್ಟರು ಎಂದರೆ ಸರಿಯಲ್ಲ. ಆ ಕಾರಣದಿಂದ ಮರಣ ಶಾಸನಕ್ಕೆ ಸುಳ್ಳು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಮತ್ತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಿಲ್ ನಲ್ಲಿ ನಾಗಮ್ಮ ಎಷ್ಟು ವರ್ಷ ದೊಡ್ಡಮಾದಪ್ಪ ರವರ ಜೊತೆ ವಾಸವಾಗಿದ್ದೆ ಎಂದು ನಮೂದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾಗಮ್ಮರವರು ವಿಲ್ ಮಾಡಿರುವ ಆಸ್ತಿಯನ್ನು ಅವರ ಜೀವನಾಂಶಕ್ಕೆ ಬಿಟ್ಟಿದ್ದು ಅವರ ಮರಣಾ ನಂತರ ವಾದಿ ಮತ್ತು ಪ್ರತಿವಾದಿಗೆ ಸಮನಾದ ವಿಭಾಗದ ಹಕ್ಕು ಇತ್ತು ಎಂದರೆ ಸರಿಯಲ್ಲ. ನಾಗಮ್ಮ ಚಿಕ್ಕಮಾದಪ್ಪ ರವರ ಜೊತೆ ವಾಸವಾಗಿದ್ದು ದೊಡ್ಡಮಾದಪ್ಪರವರ ಮನೆಗೆ ಹೋಗಿ ಬರುತ್ತಿದ್ದರು ಎಂದರೆ ಸರಿಯಲ್ಲ. ನಾಗಮ್ಮರವರ ಶವ ಸಂಸ್ಕಾರಕ್ಕೆ ನಾನು ಹೋಗಿದ್ದೆ, ಆಗ ವಾದಿ ಸಹ ಶವ ಸಂಸ್ಕಾರಕ್ಕೆ ಹೋಗಿದ್ದರು. ನಾಗಮ್ಮ ವಾದಿರವರ ಜೊತೆಯಲ್ಲಿದ್ದು ವಾದಿ ಅವರ ಅಂತ್ಯ ಕ್ರಿಯೆ ಮಾಡಿದ್ದು, ಮೋಸದಿಂದ ವಿಲ್ ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಿಲ್ ಮಾಡುವಾಗ ನಾಗಮ್ಮರವರಿಗೆ ಮಾನಸಿಕವಾಗಿ ಅಸ್ವಸ್ಥರಾಗಿರಲಿಲ್ಲ, ಅವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಮತ್ತು ಕಿವಿ ಕೇಳಿಸುತ್ತಿರಲಿಲ್ಲ ಆ ಕಾರಣ ಅವರಿಂದ ಮೋಸದಿಂದ ವಿಲ್ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ದೊಡ್ಡಮಾದಪ್ಪರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ